ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 73-78
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಲತಾ ಗುತ್ತಿಯವರ ಕಾದಂಬರಿಗಳಲ್ಲಿ ವಿಧವಾ ವಿವಾಹ : ಒಂದು ವಿಮರ್ಶಾತ್ಮಕ ನೋಟ

**ಮಂಗಳ ಎನ್.ಡಿ[1] ಮತ್ತು ಡಾ.ಟಿ.ಕೆ.ಕೆಂಪೇಗೌಡ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

***Abstract:***
*ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ನಮ್ಮ ಸಮಾಜ ಎದುರಿಸುತ್ತಿದ್ದ ಬಹುದೊಡ್ಡ ಸಾಮಾಜಿಕ ಸಮಸ್ಯೆಗಳಲ್ಲಿ ವಿಧವಾ ಸಮಸ್ಯೆಯೂ ಒಂದಾಗಿದೆ. ವಯಸ್ಸಿನ ಅಂತರದಿಂದ ಹಾಗೂ ಅನೇಕ ರೀತಿಯ ಮಾರಣಾಂತಿಕ ರೋಗಗಳ ಕಾರಣಗಳಿಂದಾಗಿ ಪ್ರಾಚೀನ ಕಾಲದಲ್ಲಿ ವಿಧವೆಯರ ಸಂಖ್ಯೆ ಹೆಚ್ಚಿತ್ತು. ಚಿಕ್ಕವಯಸ್ಸಿನಲ್ಲಿಯೇ ವೈಧವ್ಯಕ್ಕೆ ಒಳಗಾದ ಸ್ತ್ರೀಯರ ಬಾಳು ನರಕ ಸದೃಶ್ಯವಾಗಿತ್ತು. ಇವರು ಉತ್ತಮ ವಿದ್ಯಾಭ್ಯಾಸ ಹೊಂದದ ಪರಿಣಾಮ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗದೆ, ಮತ್ತೊಬ್ಬರ ಆಶ್ರಯದಲ್ಲಿ ತಮ್ಮ ಜೀವನವನ್ನು ಕಳೆಯಬೇಕಾಗಿತ್ತು. ಅಲ್ಲದೆ ಇವರು ತಮ್ಮ ಜೀವನದ ಉಳಿದ ಭಾಗವನ್ನು ಗಂಡನ ನೆನಪಿನಲ್ಲಿಯೇ ಕಳೆಯುವ ಮೂಲಕ ಬದುಕಿನ ದಾರಿ ಸವೆಸುತ್ತಿದ್ದರು. ಆದರೆ ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ ರಾಜಾರಾಮ ಮೋಹನರಾಯರು, ಜ್ಯೋತಿಭಾ ಫುಲೆ ಇತ್ಯಾದಿ ಸಮಾಜ ಸುಧಾರಕರು ತಮ್ಮ ವೈಚಾರಿಕ ಚಿಂತನೆಯಿಂದಾಗಿ ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡುವ ಮೂಲಕ ವಿಧವಾ ಸಮಸ್ಯೆಯನ್ನು ಬಹುಮಟ್ಟಿಗೆ ನಿವಾರಿಸಲು ಸಾಕಷ್ಟು ಪರಿಶ್ರಮಪಟ್ಟರು. ಇಷ್ಟೆಲ್ಲಾ ಹೋರಾಟಗಳ ನಡುವೆಯೂ ಸ್ವಾತಂತ್ರ್ಯ ನಂತರದಲ್ಲಿ ವಿಧವಾ ವಿವಾಹದ ಪ್ರಮಾಣ ಕಡಿಮೆಯಾಗಿಲ್ಲದಿರುವುದು ವಿಪರ್ಯಾಸ. ಇದು ಸಮಾಜದಲ್ಲಿನ ಧಾರ್ಮಿಕ ಕಟ್ಟಳೆಗಳನ್ನು ಮೀರಿದ ಸಂಪ್ರದಾಯಬದ್ಧ ಜನರ ಆಲೋಚನೆಗಳನ್ನು ಬಿಂಬಿಸುತ್ತದೆ.*

***Keywords:*** *ಕನ್ನಡ ಸಾಹಿತ್ಯ, ಕಾದಂಬರಿ, ಲತಾ ಗುತ್ತಿ, ಕರಿನೆರಳು, ಚದುರಂಗ, ವಿಧವಾ ವಿವಾಹ, ಮಹಿಳೆ.*

## ಪೀಠಿಕೆ

ವಿಧವಾ ವಿವಾಹ ಪೂರ್ಣ ಪ್ರಮಾಣದಲ್ಲಿ ಆಚರಣೆಗೆ ಬರಬೇಕೆಂದರೆ ಮೊದಲು ಸ್ತ್ರೀಯರು ಮನಸ್ಸು ಮಾಡಬೇಕು. ಅವರು ತಮ್ಮಲ್ಲಿರುವ ಹಿಂಜರಿಕೆ ಮನೋಭಾವವನ್ನು ಮೆಟ್ಟಿ ನಿಂತಾಗ ಮಾತ್ರ ವಿಧವಾ ವಿವಾಹಗಳು ಸಂಪೂರ್ಣವಾಗಿ ಯಶಸ್ವಿಯಾಗುತ್ತವೆ. ಇಲ್ಲದಿದ್ದಲ್ಲಿ ಸಂಪ್ರದಾಯಕ್ಕೆ ಶರಣಾದ ವಿಧವೆಯರ ಬದುಕು ಮತ್ತಷ್ಟು ಶೋಚನೀಯ ಸ್ಥಿತಿಗೆ ತಳ್ಳಲ್ಪಡುತ್ತದೆ. ಇಂತಹ ವಿಧವಾ ಸ್ತ್ರೀಯರ ಪಾತ್ರಗಳನ್ನು ವಿಭಿನ್ನ ದೃಷ್ಟಿಕೋನದಲ್ಲಿ ನೋಡುವ ಲೇಖಕಿ, ತಮ್ಮ ಕಾಲಘಟ್ಟದಲ್ಲಿ ಜರುಗಿದ ವಿಧವಾ ವಿವಾಹಗಳ ಬಗೆಗಿನ ಪರ ಮತ್ತು ವಿರೋಧದ ನೆಲೆಗಳನ್ನು ತಮ್ಮ ಸಾಹಿತ್ಯದಲ್ಲಿ ಅಭಿವ್ಯಕ್ತಿಸುವ ಮೂಲಕ ಕಾದಂಬರಿಗಳಲ್ಲಿನ ಪಾತ್ರಗಳನ್ನು ಭಿನ್ನತೆಯೆಡೆಗೆ ಕೊಂಡೊಯ್ದಿದ್ದಾರೆ. ಈ ಹಿನ್ನೆಲೆಯಲ್ಲಿ ವಿಧವಾ

***Please cite this article as:*** ಮಂಗಳ ಎನ್.ಡಿ ಮತ್ತು ಟಿ.ಕೆ.ಕೆಂಪೇಗೌಡ. (2025). ಲತಾ ಗುತ್ತಿಯವರ ಕಾದಂಬರಿಗಳಲ್ಲಿ ವಿಧವಾ ವಿವಾಹ: ಒಂದು ವಿಮರ್ಶಾತ್ಮಕ ನೋಟ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(4), 73–78

ವಿವಾಹಕ್ಕೆ ಸಮಾಜ ನೀಡಿದ ಪ್ರಕ್ರಿಯೆಯನ್ನು ಈ ಭಾಗದಲ್ಲಿ ಅಧ್ಯಯನಕ್ಕೆ ಒಳಪಡಿಸಿ ವಿಶ್ಲೇಷಿಸಲಾಗಿದೆ.

'ಕರಿನೀರು' ಕಾದಂಬರಿಯಲ್ಲಿನ ಶಾರದಾ ವಿಧವೆಯಾಗಿ ಅನುಭವಿಸುವ ನೋವು, ಹತಾಶೆ, ಅವಮಾನ ಹಾಗೂ ಮಾನಸಿಕ ಹಿಂಸೆಗಳನ್ನು ಭಿತ್ತರಿಸುತ್ತದೆ. ಮದುವೆಯಾದ ಮೂರ್ನಾಲ್ಕು ವರ್ಷಕ್ಕೆ ಅನಾರೋಗ್ಯದ ಕಾರಣದಿಂದಾಗಿ ಗಂಡನನ್ನು ಕಳೆದುಕೊಂಡ ಶಾರದ ಅನಿವಾರ್ಯವಾಗಿ ತವರು ಮನೆಯನ್ನು ಆಶ್ರಯಿಸಬೇಕಾಗುತ್ತದೆ. ಶಾರದಾಳ ಅಣ್ಣ ಶ್ರೀನಿವಾಸ ಅವಳಿಗೆ ಮರುವಿವಾಹ ಮಾಡಲು ಬಯಸುತ್ತಾನೆ. ಆದರೆ ಶಾರದ ತಾನು ಜೀವಂತವಾಗಿರುವವರೆಗೂ ತನ್ನ ಗಂಡನನ್ನು ಹೊರತುಪಡಿಸಿ ಬೇರೊಬ್ಬನೊಂದಿಗೆ ದಾಂಪತ್ಯ ಜೀವನ ಕಟ್ಟಿಕೊಳ್ಳಲು ಸಾಧ್ಯವಿಲ್ಲವೆಂಬ ದೃಢಸಂಕಲ್ಪ ಮಾಡುತ್ತಾಳೆ. ಹೆಣ್ಣಿನ ಬಾಳಿನಲ್ಲಿ ಮದುವೆ ಎಂಬುದು ಒಂದು ಸಲ ಮಾತ್ರ ಘಟಿಸುವಂತಹದ್ದು ಎಂಬ ಸಂಕುಚಿತ ಮನೋಭಾವವನ್ನು ಹೊಂದುವ ಮೂಲಕ ಮರುವಿವಾಹಕ್ಕೆ ಒಪ್ಪಿಗೆ ನೀಡುವುದಿಲ್ಲ. ಹೀಗಾಗಿ ಶಾರದ ಅನಿವಾರ್ಯವೆಂಬತೆ "ಸಂಪ್ರದಾಯದ ಪ್ರಕಾರ ಕೇಶ ಮುಂಡನ ಮಾಡಿಸಿಕೊಂಡು ಜೀವನದುದ್ದಕ್ಕೂ ಬಿಳಿಸೀರೆ ಧರಿಸಿಸಿಕೊಂಡು, ಒಂದು ಹೊತ್ತು ಊಟ ಮಾಡುತ್ತಾ, ದೇವರ ಸ್ಮರಣೆ ಮಾಡುತ್ತಾ ಕಾಲ ಕಳೆಯುತ್ತಿದ್ದಳು"[1] ಇದು ಅಲಂಕಾರ ಪ್ರಿಯರಾದ ಸ್ತ್ರೀಯರು ತಮ್ಮ ವೈಧವ್ಯದ ಕಾರಣದಿಂದಾಗಿ ವಿಲಕ್ಷಿತ ಜೀವನ ನಡೆಸುತ್ತಿದ್ದುದ್ದನ್ನು ಪರಿಣಾಮಕಾರಿಯಾಗಿ ಚಿತ್ರಿಸಿದೆ. ತಾನು ಕಲಿತಿದ್ದ ಹೊಲಿಗೆ, ಹೆಣಿಕೆ, ಕಸೂತಿ ಮೊದಲಾದ ವಿದ್ಯೆಗಳನ್ನು ಊರಿನ ಹೆಣ್ಣು ಮಕ್ಕಳಿಗೆ ಹೇಳಿಕೊಡುವ ಶಾರದ ತನ್ನ ಮುಂದಿನ ಭವಿಷ್ಯದ ಬಗೆಗೆ ಚಿಂತಿಸುವುದಿಲ್ಲ. ಅಲ್ಲದೇ ಮಗಳಿಗೆ ಇಂತಹ ದುಸ್ಥಿತಿ ಒದಗಿದ್ದರ ಬಗೆಗೆ ವೈಚಾರಿಕ ನೆಲೆಯಲ್ಲಿ ಯೋಚಿಸಿ ಮರುವಿವಾಹ ಮಾಡುವ ಸಾಹಸವನ್ನು ಆಕೆಯ ತಂದೆಯೂ ಕೂಡ ಮಾಡದಿರುವುದು ವಿಪರ್ಯಾಸ. ಗಂಡಿಗೆ ಮರುವಿವಾಹ ವಿಷಯದಲ್ಲಿ ಪ್ರೋತ್ಸಾಹಿಸುವ ಸಮಾಜ ಹೆಣ್ಣಿನ ವೈಧವ್ಯದ ವಿಷಯದಲ್ಲಿ ಮಾತ್ರ ಇಂತಹ ಕ್ರೂರ ಆಚರಣೆಗಳನ್ನು ವಿಧಿಸಿರುವುದು ಸಮಾಜದ ಅಮಾನವೀಯ ನಡೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಪಾರ ಆಸಕ್ತಿಯನ್ನು ಹೊಂದಿದ್ದ ಶಾರದ ಬೆಳಗಾವಿಗೆ ಬಂದ ಗಾಂಧೀಜಿಯನ್ನು ಭೇಟಿ ಮಾಡಲು ಉತ್ಸುಕಳಾಗಿ ಬೆಳಗಾವಿಗೆ ಹೋಗುತ್ತಾಳೆ. ಇದರಿಂದ ಶಾರದ ತನ್ನ ಅತ್ತಿಗೆಯ ಕೆಂಗಣ್ಣಿಗೆ ಗುರಿಯಾಗಿ ಅನೇಕ ರೀತಿಯ ನಿಂದನೆಗೆ ಒಳಗಾಗಬೇಕಾಗುತ್ತದೆ. ಅತ್ತಿಗೆಯ ನಿಕೃಷ್ಟ ನುಡಿಗಳು ಶಾರದಾಳಿಗೆ ಸಂಪ್ರದಾಯದ ಕರಾಳ ಮುಖವನ್ನು ಪರಿಚಯಿಸುತ್ತದೆ. "ಮೊದಲು ಶಾರದವ್ವಾಗ ನಾಚಿಕೆ ಆಗಬೇಕು. ಮೊದಲಿನಿಂದ ಆಕಿನ ಬೆಳಗಾವಿಯೊಳಗೆ ನಮ್ಮ ಜೋಡಿ ಕೆಲಸ ಮಾಡಿಕೊಳ್ಳಾಕ ಇಟ್ಟುಕೊಳ್ಳಬೇಕಾಗಿತ್ತು. ಅಪ್ಪ ಅವ್ವನ ಜೊತೆ ಇರ್ತಿನಿ ಅಂದಳು, ಈಗ ನೋಡ್ರಿ ಮಂದಿ ಗಂಡಸರ ಬೆನ್ನು ಹತ್ತಿ ಚಕ್ಕಡಿ ಏರಿ ಬೆಳಗಾವಿಗೆ ಹೋಗ್ತಾಳೆ, ನಾಚಿಕೆ ಇಲ್ಲದಾಕಿ, ಅಣ್ಣ ತಮ್ಮಂದಿರ ಹೆಸರು ಕೆಡಿಸುವಾಕಿ"[2] ಎಂದು ನೋವಿನ ಮೇಲೆ ಬರೆ ಎಳೆಯುವಂತೆ ತಾತ್ಸಾರದ ಮಾತುಗಳನ್ನಾಡುತ್ತಾಳೆ. ತಾನೊಂದು ಹೆಣ್ಣಾಗಿ ವಿಧವೆ ಹೆಣ್ಣಿನ ಬಗೆಗೆ ಮರುಕ ಪಡದ ಅತ್ತಿಗೆ 'ಹೆಣ್ಣಿಗೆ ಹೆಣ್ಣೇ ಶತ್ರು' ಎಂಬಂತೆ ಕ್ರೂರ ರೀತಿಯಲ್ಲಿ ವರ್ತಿಸುತ್ತಾಳೆ.

ಶೇಟ್ಟೆ ಬಿ.ಎಸ್‌ರವರು ಗುರುತಿಸುವಂತೆ "ಗಂಡು–ಹೆಣ್ಣು ಸಮಾನರೆಂಬ ಭಾವನೆಗಳು ಇತಿಹಾಸದ ಗರ್ಭದಲ್ಲಿ ಮರೆಯಾಗಿ ಗಂಡು ಪ್ರಧಾನ, ಶ್ರೇಷ್ಠ ಎಂಬ ಭಾವನೆಗಳು ಬಲಿಷ್ಠವಾಗುತ್ತಿದ್ದಂತೆಯೇ ಪತಿ–ಪತ್ನಿ ವ್ಯವಸ್ಥೆಯಲ್ಲಿಯೂ ಕೆಲವು ಮಾರ್ಪಾಟುಗಳು ಕಂಡುಕೊಂಡವು. ಪತಿ ಕುಟುಂಬ ಜೀವನದಲ್ಲಿ ಪ್ರಾಮುಖ್ಯವೆನಿಸಿ ಪತ್ನಿ ಎರಡನೆಯ ಸ್ಥಾನ ಈ ಸಂದರ್ಭದಲ್ಲಿ ಹೆಣ್ಣಿನ ನಡತೆ, ಶೀಲಾ, ಸೇವೆ, ಭಕ್ತಿ ಮೊದಲಾದವುಗಳನ್ನು ಪುರುಷ ಈ ಒಂದು ಹಿನ್ನೆಲೆಯಲ್ಲಿ ಪಾತಿವ್ರತ್ಯ ಕಲ್ಪನೆಯೂ ಬೆಳೆದು ಬಂತು. ಈ ಆವಿಷ್ಕಾರವಾದಂದಿನಿಂದ ಪುರುಷನ ಸ್ವತ್ತು ಸ್ತ್ರೀ ಎಂಬ ತಿಳಿವಳಿಕೆಗೆ ದಾರಿ ಮಾಡಿಕೊಟ್ಟಿತೆಂದೇ

ಹೇಳಬೇಕು. ಗಂಡನ ಅಸ್ತಿತ್ವವನ್ನು ಮುತ್ತೈದೆ ಎಂಬ ಪರಿಕಲ್ಪನೆಯಲ್ಲಿ ಕಂಡುಕೊಳ್ಳಲು ಪ್ರಾರಂಭಿಸಿದರು. ಮುತ್ತೈದೆ ಮಂಗಳವೆನಿಸಿದರೆ ಮುತ್ತೈದೆ ಅಲ್ಲದವಳು ಅಮಂಗಳವೆನಿಸಿದಳು. 'ದೀರ್ಘ ಸುಮಂಗಲಿಭವ' 'ಅಖಂಡ ಸೌಭಾಗ್ಯವತಿಭವ' ಈ ಮೊದಲಾದ ಸಾಲುಗಳು ಶ್ರೇಷ್ಠತೆಯನ್ನು ಪತ್ನಿಯ ಮಂಗಳತೆ, ಪಾತಿವ್ರತೆಗಳನ್ನು ಸೂಚಿಸುವ ತತ್ವಗಳಾಗಿವೆ"[3] ಇಂತಹ ಸಮಾಜದ ಕಟ್ಟುಪಾಡುಗಳು ಮಹಿಳಾ ಬದುಕನ್ನು ಸಾಮಾಜಿಕ ನೆಲೆಯಿಂದ ವಂಚಿಸಿ, ಅವಳ ಬದುಕಿನ ಪರಿಯನ್ನೇ ಬದಲಾಯಿಸಿಬಿಡುವುದು ಸೋಜಿಗ. ಶಾರದಾಳ ಅತ್ತಿಗೆಯ ಮಾತು ವಿಧವೆಯಾದವಳು ನಾಲ್ಕು ಗೋಡೆಗಳ ಮಧ್ಯೆ ಬಂಧಿಯಾಗಿ ತನ್ನ ಇಡೀ ಜೀವಮಾನವನ್ನು ಕಳೆಯಬೇಕೆಂಬ ಧೋರಣೆ ಹೊಂದಿರುವುದನ್ನು ತಿಳಿಸುವುದರೊಂದಿಗೆ, ವಿಧವೆಯ ಬಗ್ಗೆ ಭಾರತೀಯ ಸಮಾಜವು ಹೊಂದಿರುವ ಮೌಢ್ಯವನ್ನು ಬಿಟ್ಟಿಲ್ಲ ಪರಿಚಯಸುತ್ತದೆ. ಸ್ವತಃ ಮಹಿಳೆಯೇ ವಿಧವಾ ಮಹಿಳೆಯನ್ನು ಅವಮಾನಿಸಿ ಶೋಷಿಸುವ ಸಂದರ್ಭಗಳು ಸಮಾಜದಲ್ಲಿ ಆಳವಾಗಿ ನೆಲೆಯೂರಿರುವ ಮೂಢನಂಬಿಕೆ ಮತ್ತು ಮಡಿವಂತಿಕೆಗಳ ವಾತಾವರಣವನ್ನು ಪ್ರಸ್ತುತಪಡಿಸುತ್ತದೆ. ಇಲ್ಲಿ ಶಾರದಾಳ ತಂದೆ ಮಾಸ್ತರರಾಗಿದ್ದು, ಎಲ್ಲಾ ವಿಚಾರಗಳನ್ನು ಅರಿತಿದ್ದರೂ ಸಂಪ್ರದಾಯವನ್ನು ಮೀರದಿರುವುದು ಅವರ ಸಂಪ್ರದಾಯಬದ್ಧ ಮನಸ್ಥಿತಿಯನ್ನು ತಿಳಿಸುತ್ತದೆ.

ಶಾರದಾಳಿಗೆ ತವರು ಮನೆಯ ಆಶ್ರಯ ಇರುವವರೆಗೂ ಯಾವುದೇ ರೀತಿಯ ತೊಂದರೆ ಉಂಟಾಗುವುದಿಲ್ಲ. ಆದರೆ ತಂದೆ–ತಾಯಿಯ ಮರಣದ ನಂತರ ಮನೆಯಲ್ಲಿ ಏಕಾಂಗಿಯಾಗಿ ಉಳಿಯುವ ಶಾರದಾಳಿಗೆ ಊರಿನ ಪುಂಡಪೋಕರಿಗಳಿಂದ ಅನೇಕ ರೀತಿಯ ಸಂಕಷ್ಟ ಎದುರಾಗುತ್ತದೆ. ಅಲ್ಲದೇ ಶಾರದಾಳ ಅಣ್ಣ ಕೂಡ ತಂಗಿಯೆಂಬ ಮಮಕಾರ ಇಲ್ಲದೇ ಆರ್ಥಿಕ ಸಮಸ್ಯೆಯ ನೆಪವೊಡ್ಡಿ ಅವಳನ್ನು ಊರಿನಲ್ಲಿಯೇ ಬಿಟ್ಟು ಹೋಗುವುದು ಅಮಾನವೀಯ. ಇಂತಹದೇ ಸಮಯಕ್ಕಾಗಿ ಕಾಯುತ್ತಿದ್ದ ಸೋದ್ಯಾನಂತಹ ಕಾಮುಕ ಗಂಡಸರು ವಿಧವೆಯೆಂಬ ದೌರ್ಬಲ್ಯವನ್ನು ಬಳಸಿಕೊಂಡು ಆಕೆಯ ಚಾರಿತ್ರ್ಯಕ್ಕೆ ಕಳಂಕ ತರುವ ಪ್ರಯತ್ನ ಮಾಡುತ್ತಾರೆ. ತನ್ನದಲ್ಲದ ತಪ್ಪಿಗೆ ಶಾರದಾ ಅನಿವಾರ್ಯವಾಗಿ ಕುಟುಂಬ ಹಾಗೂ ಊರ ಜನರಿಂದ ನಿಂದನೆಗೆ ಒಳಗಾಗಬೇಕಾಗುತ್ತದೆ. ಪುನರ್ ವಿವಾಹದಂತಹ ಅವಕಾಶಗಳಿದ್ದರೂ ವೈರಾಗಿಯಂತೆ ಒಂಟಿ ಜೀವನ ನಡೆಸಲು ಬಯಸುವ ಶಾರದ ತನ್ನ ಬಾಳಿನ ಕೊನೆಗಾಲದಲ್ಲಿ ಆಶ್ರಯದ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಸಮಾಜವು ವಿಧವೆಯಾದವಳಿಗೆ ಒಂಟಿಯಾಗಿ ಜೀವನ ನಡೆಸಲು ಅವಕಾಶ ನೀಡದೆ ಹೇಗೆ ಅವಳ ಬದುಕನ್ನು ಗಗನ ಕುಸುಮವಾಗಿಸುತ್ತದೆ ಎಂಬುದಕ್ಕೆ ಈ ಕಾದಂಬರಿ ಉತ್ತಮ ನಿರ್ದೇಶನವಾಗಿದೆ.

ಸಮಾಜದ ವಾಸ್ತವ ಸಂಗತಿಗಳನ್ನು ಕಾದಂಬರಿಯಲ್ಲಿ ತರುವ ಲೇಖಕಿ ವಿಧವೆಯರ ವಿಷಯದಲ್ಲಿ ಸಮಾಜ ಹೇಗೆ ನಿರ್ದಾಕ್ಷಿಣ್ಯವಾಗಿ ವರ್ತಿಸುತ್ತದೆ ಎಂಬುದನ್ನು ಶಾರದ ಪಾತ್ರದ ಮೂಲಕ ಮನವರಿಕೆ ಮಾಡಿಕೊಟ್ಟಿದ್ದಾರೆ. ವೈಧವ್ಯದ ನೆಲೆಯಿಂದಲೇ ನಡೆಯುವ ಸ್ತ್ರೀ ಶೋಷಣೆಯ ಹಲವು ಮುಖಗಳನ್ನು ಪರಿಚಯಿಸುವ ಲತಾ ಗುತ್ತಿಯವರು ವಿಧವಾ ಸಮಸ್ಯೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಸಂಪ್ರದಾಯದ ನಿಯಂತ್ರಣದೊಳಗೆ ಸಿಲುಕಿಕೊಂಡು ತಮ್ಮ ಬದುಕನ್ನು ಅಧಃಪತನದತ್ತ ಕೊಂಡೊಯ್ಯುವ ಸ್ತ್ರೀಯರು ಮೌಢ್ಯವೆಂಬ ಸಂಕೋಲೆಯಿಂದ ಹೊರ ಬಂದಾಗ ಮಾತ್ರ ಹೊಸ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲದಿದ್ದಲ್ಲಿ ಗೊಡ್ಡು ಸಂಪ್ರದಾಯಕ್ಕೆ ಜೋತು ಬಿದ್ದು ಎಲ್ಲವನ್ನು ಮೌನವಾಗಿ ಸಹಿಸಬೇಕಾಗುತ್ತದೆ ಎಂಬುದನ್ನು ತಿಳಿಸುವ ಲೇಖಕಿ, ವಿಧವೆಯ ಬಾಳು ಹೇಗೆ ಯಾತನಮಯವಾಗಿರುತ್ತದೆ ಎಂಬುದನ್ನು ಪಾತ್ರಗಳ ಹಿನ್ನಲೆಯಲ್ಲಿ ವಿಶ್ಲೇಷಿಸಿದ್ದಾರೆ. ವಿಧವೆಯರನ್ನು ನಿಕೃಷ್ಟವಾಗಿ ನಡೆಸಿಕೊಳ್ಳುವ

ಸಮಾಜದಲ್ಲಿನ ಇಂತಹ ಕುಟುಂಬಗಳು ಇತ್ತೀಚಿಗೆ ಬದಲಾವಣೆ ರೂಢಿಸಿಕೊಳ್ಳುತ್ತಿದ್ದರೂ, ಅಂದಿನ ಕಾಲದಲ್ಲಿ ವಿಧವಾ ಸ್ತ್ರೀಯರು ಅನುಭವಿಸಿದ ವೇದನೆಯನ್ನು ಕಾದಂಬರಿ ನೈಜವಾಗಿ ಚಿತ್ರಿಸಿದೆ. ಈ ಕಾದಂಬರಿಯಲ್ಲಿ ಬರುವ ಹಲವು ಪಾತ್ರಗಳು ಸಂಪ್ರದಾಯದ ಮಡಿಲನ್ನು ಬಿಟ್ಟು ವೈಚಾರಿಕ ರೀತಿಯಿಂದ ವರ್ತಿಸದೆ, ವಿಧವಾ ಜೀವನವನ್ನು ವೈಭವೀಕರಿಸುತ್ತವೆ. ವಿಧವಾ ಆಚರಣೆಗಳ ವಿಷಯದಲ್ಲಿ ಸಮಾಜ ನೋಡುತ್ತಿರುವ ದೃಷ್ಟಿಕೋನ ಬದಲಾಗಬೇಕೆಂಬುದು ಈ ಕಾದಂಬರಿ ರಚನೆಯ ಮೂಲ ಆಶಯಗಳಲ್ಲಿ ಒಂದಾಗಿದೆ.

ವಿಧವೆಯಾದ ಉಮಾಳ ಬಾಳಿನಲ್ಲಿ ಪುನರ್ ವಿವಾಹವು ಹೊಸ ಬೆಳಕಾಗಿ ಕಂಡು ಬರುವುದನ್ನು 'ಚದುರಂಗ' ಕಾದಂಬರಿಯು ನಿರೂಪಿಸುತ್ತದೆ. ಮದುವೆಯಾದ ಒಂದು ವರ್ಷಕ್ಕೆ ಗಂಡನನ್ನು ಕಳೆದುಕೊಂಡ ಉಮಾ ಆರ್ಥಿಕ ಸಮಸ್ಯೆಯ ಕಾರಣದಿಂದಾಗಿ ಹೋಟೆಲ್‌ನಲ್ಲಿ ಕೆಲಸಕ್ಕೆ ಸೇರುತ್ತಾಳೆ. ಹೋಟೆಲ್ ಮಾಲಿಕ ಸುರೇಶ ಉಮಾಳ ಅಸಹಾಯಕತೆಯನ್ನರಿತು ಅವಳೊಂದಿಗೆ ಅಸಭ್ಯವಾಗಿ ವರ್ತಿಸುತ್ತಾನೆ. ಸುರೇಶನ ದುರುದ್ದೇಶವನ್ನು ಮನಗಂಡ ಗುರುಪಾದ ವಿಧವೆಯಾದ ಉಮಾಳ ಬದುಕನ್ನು ಸರಿಪಡಿಸುವ ತವಕದಿಂದ ಆಕೆಗೆ ಮರುಮದುವೆ ಮಾಡಲು ಮುಂದಾಗುತ್ತಾನೆ. ಇದಕ್ಕಾಗಿ ಗುರುಪಾದ ತನ್ನ ತಮ್ಮನಾದ ಮಹಾದೇವನಿಗೆ ಉಮಾಳ ಇತಿ ವೃತ್ತಾಂತವನ್ನೆಲ್ಲಾ ತಿಳಿಸಿ ಮರುವಿವಾಹವಾಗುವಂತೆ ಪ್ರೇರೇಪಿಸುತ್ತಾನೆ. ಅಣ್ಣನ ಶಿಕ್ಷಣ ಹಾಗೂ ವೈಚಾರಿಕ ಕ್ರಾಂತಿಯಿಂದ ಪ್ರಭಾವಿತನಾಗಿದ್ದ ಮಹಾದೇವ ಯಾವುದೇ ರೀತಿಯ ಹಿಂಜರಿಕೆಯಿಲ್ಲದೆ ವಿಧವೆಯಾದ ಉಮಾಳನ್ನು ಮರು ಮದುವೆಯಾಗಲು ಒಪ್ಪಿಗೆ ಸೂಚಿಸುತ್ತಾನೆ. ಆದರೆ ಗುರುಪಾದನ ಮೇಲೆ ಒಲವನ್ನು ಹೊಂದಿದ್ದ ಉಮಾ, ಮೊದಮೊದಲು ಮದುವೆಗೆ ಒಪ್ಪುಗೆ ನೀಡುವುದಿಲ್ಲ. ಆದರೆ ಉಮಾಳ ತಾಯಿ "ನಾನು ಇನ್ನು ಎಷ್ಟು ಕಾಲ ನಿನ್ನ ಜೊತೆ ಇರಲು ಸಾಧ್ಯ? ನನಗೂ ವಯಸ್ಸಾಯ್ತು. ನನ್ನ ಮರಣದ ನಂತರ ನೀನು ಒಬ್ಬಂಟಿಯಾದರೆ ಸುರೇಶನಂತಹ ರಣಹದ್ದುಗಳು ನಿನ್ನನ್ನು ಸುಮ್ಮನೆ ಬಿಡುತ್ತಾರೆಯೇ? ನಿನಗೂ ಸಂಗಾತಿ ಅಗತ್ಯವಿದೆ ಯೋಚಿಸು"[4] ಎಂದು ಬುದ್ದಿ ಮಾತುಗಳನ್ನು ಹೇಳುತ್ತಾರೆ. ನಂತರದ ದಿನಗಳಲ್ಲಿ ತನ್ನ ಮನಸ್ಸಿನಲ್ಲೇ ಕೇಂದ್ರಿತವಾಗಿದ್ದ ಆಕರ್ಷಣೆಗೆ ಅಂತ್ಯವಾಡುವ ಉಮಾ ದೊರಕಿದ್ದನ್ನು ಹಂಬಲಿಸಿ ಪಡೆಯಲು ನಿರ್ಧರಿಸಿ ಮಹಾದೇವನನ್ನು ವಿವಾಹವಾಗುತ್ತಾಳೆ. ಆ ಮೂಲಕ ಆತನೊಂದಿಗೆ ಸುಖಃ ಜೀವನದ ರೂವಾರಿಯಾಗಿ ಸಂಸಾರ ಸಾಗಿಸುತ್ತಾಳೆ.

ಸಮಾಜದಲ್ಲಿ ಕಳಂಕಿತ ಪಟ್ಟಹೊತ್ತ ವಿಧವೆಗೆ ಮದುವೆಯಾಗದ ಮೊದಲ ಆದ್ಯತೆಯ ವರ ದಕ್ಕುವ ಸಾಧ್ಯತೆಗಳು ತೀರಾ ವಿರಳ. ಇಂತಹ ಅವಕಾಶ ದಕ್ಕುವುದೇ ಇಲ್ಲವೆಂದಲ್ಲ. ಆದರೆ ವಿಧವೆಯರ ಬಗೆಗೆ ಅನುಕಂಪದ ನೆಲೆಯಲ್ಲಿ ಯೋಚಿಸಿ ಅವರ ಬಾಳು ಬೆಳಗಲು ಮುಂದೆ ಬರುವವರು ಕಡಿಮೆ ಪ್ರಮಾಣದಲ್ಲಿ ಕಾಣಸಿಗುತ್ತಾರೆ. ಹೀಗಿರುವಾಗ ವಿಧವೆಯಾದ ಉಮಾ ಮೊದಲ ಸಂಬಂಧದ ವರರನ್ನು ವರಿಸುವಲ್ಲಿ ಯಶಸ್ವಿಯಾಗುತ್ತಾಳೆ. ನೆಮ್ಮದಿಯ ಬದುಕಿಗಾಗಿ ಎರಡನೇ ಮದುವೆಯಾಗುವ ಉಮಾಳ ಪಾತ್ರ ಆಧುನಿಕ ವಿದ್ಯಮಾನದ ಪಾತ್ರವಾಗಿ ಮೂಡಿಬಂದಿದೆ. ವಿಧವೆಯಾದ ಉಮಾಳಿಗೆ ವಿಧವಾ ಜೀವನದಿಂದ ಮುಕ್ತಿ ನೀಡುವ ಮಹಾದೇವನ ವ್ಯಕ್ತಿತ್ವ ಮಾನವೀಯ ನೆಲೆಯಿಂದ ಕೂಡಿದ್ದು, ಕಾದಂಬರಿಯುದ್ದಕ್ಕೂ ಉದಾರ ಮನೋಭಾವದ ಪಾತ್ರವಾಗಿ ಸೃಷ್ಟಿಗೊಂಡಿದೆ. ವಾಸ್ತವಿಕ ಹಾಗೂ ವೈಚಾರಿಕ ಪ್ರಜ್ಞೆಯಿಂದ ಯೋಚಿಸುವ ಮಹಾದೇವನಂತಹ ಪಾತ್ರಗಳು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗೆ ಸಹಕಾರಿಯಾಗಿದೆ.

ಈ ಕಾದಂಬರಿಯಲ್ಲಿ ಕಂಡು ಬರುವ ಗುರುಪಾದನ ಪಾತ್ರವೂ ಆಧುನಿಕತೆಯ ಸ್ಪರ್ಶದೊಂದಿಗೆ ಮೈದಳೆದಿದ್ದು, ವೈಚಾರಿಕ

ಚಿಂತನೆಯಿಂದ ಕೂಡಿದ್ದಾಗಿದೆ. ಸಂಪ್ರದಾಯ ಮನೆತನದವನಾದ ಈತ ತನ್ನ ತಾಯಿ ಹಾಗೂ ತಮ್ಮನನ್ನು ಒಪ್ಪಿಸಿ, ಸಂಪ್ರದಾಯದ ಎಲ್ಲೆಯನ್ನು ಮೀರಿ ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡುವ ಈತನ ಪಾತ್ರ ಸೃಷ್ಟಿ ಆಶಾದಾಯಕವಾದದು. ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ವಿಚಾರವಂತಿಕೆಯ ನಡವಳಿಕೆಯುಳ್ಳ ಗುರುಪಾದನಂತಹ ಪಾತ್ರಗಳು ಅಗತ್ಯವಾಗಿವೆ.

ಸಾಮಾಜಿಕ ವ್ಯವಸ್ಥೆಯೊಳಗೆ ವಿಧವೆ ಯಾವಾಗಲೂ ಬಹಿಷ್ಕೃಳಂತೆಯೇ ದೂರ ನಿಲ್ಲಬೇಕೆಂಬ ನಿಲುವು ಅನಾದಿ ಕಾಲದಿಂದಲೂ ಆಚರಣೆಯಲ್ಲಿದೆ. ಈ ಹಿನ್ನೆಲೆಯಲ್ಲಿ ವಿಧವಾ ಸಮಸ್ಯೆಗೆ ಪರಿಹಾರ ರೂಪಕವಾಗಿ ವಿಧವಾ ವಿವಾಹ ರೂಪುಗೊಂಡಿದ್ದು, ವಿಧವೆಯರು ಅನುಭವಿಸುವ ನೋವು ಹಾಗೂ ಮಾನಸಿಕ ಹಿಂಸೆ ಮೊದಲಾದವುಗಳಿಂದ ಮುಕ್ತಿಗೊಳಿಸಲು ಇದು ಸಹಕಾರಿಯಾಗಿದೆ. ಹೀಗಾಗಿ ಸಮಾಜ ಸುಧಾರಣೆಯಲ್ಲಿ ವಿಧವಾ ವಿವಾಹಗಳು ಮಹತ್ವದ ಸ್ಥಾನ ಪಡೆದಿದ್ದು, ಸಮಾಜದ ಅನಿಷ್ಟಗಳನ್ನು ತೊಡೆದು ಹಾಕುವಲ್ಲಿ ಪ್ರಮುಖ ಅಸ್ತ್ರವಾಗಿ ಪರಿಣಮಿಸಿದೆ. ವಿಧವಾ ವಿವಾಹಗಳ ಆಚರಣೆಯು ಅಧಿಕೃತವಾಗಿ ಸಮಾಜದಲ್ಲಿ ಜಾರಿಗೊಳ್ಳಬೇಕಾದರೆ ಮೊದಲು ಪುರುಷ ಸಮಾಜ ಅದಕ್ಕೆ ಅವಕಾಶ ಮಾಡಿಕೊಡಬೇಕು. ಅಲ್ಲದೇ ಅಷ್ಟೇ ಮುಖ್ಯವಾಗಿ ಸಂಪ್ರದಾಯದ ಪರಿಧಿಯಿಂದ ಹೊರಬಂದು ಸ್ತ್ರೀಯರು ಮರುಮದುವೆಯಾಗುವಂತಹ ದೃಢ ನಿರ್ಧಾರ ಕೈಗೊಳ್ಳಬೇಕು. ಹಾಗಿದ್ದಾಗ ಮಾತ್ರ ವಿಧವಾ ವಿವಾಹಗಳು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಮಹಾದೇವನೊಂದಿಗೆ ವಿಧವೆ ಉಮಾಳ ವಿವಾಹ ನಡೆಸುವ ಲೇಖಕಿಯ ಸುಧಾರಣಾವಾದಿ ನಿಲುವು ಪ್ರಗತಿಪರವಾಗಿದ್ದು, ಸಮಾಜದ ಸಕಾರಾತ್ಮಕ ಬೆಳವಣಿಗೆಯ ಮುನ್ನೋಟದಂತಿದೆ.

ಲತಾ ಗುತ್ತಿಯವರು ಸೃಷ್ಟಿಸಿದ ಪಾತ್ರಗಳು ವಿಧವಾ ಸಮಸ್ಯೆಯ ಎರಡೂ ಮುಖಗಳನ್ನು ಪ್ರತಿನಿಧಿಸುತ್ತದೆ. ವೈಧವ್ಯದ ನೆಲೆಯಲ್ಲಿ ಸಿಲುಕಿ ಅಸಹಾಯಕತೆಯಿಂದ ನರಳುವ ಶಾರದಾ ಸಂಪ್ರದಾಯದ ಪರಿಧಿಯಲ್ಲಿ ಬಂಧಿಯಾಗಿ ನರಕ ಯಾತನೆ ಅನುಭವಿಸುತ್ತಾಳೆ. ವಾಸ್ತವದ ಅರಿವಿಲ್ಲದೆ ವಿಧವಾ ವಿವಾಹದಂತಹ ಹೊಸ ವಿಚಾರಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಲಾಗದ ಶಾರದಾಳಂತಹ ಮಹಿಳೆಯರು ಕೊನೆಗೆ ತನ್ನ ಅಸ್ತಿತ್ವಕ್ಕಾಗಿ ಹೋರಾಟ ನಡೆಸುವ ಸಂದರ್ಭ ಒದಗಿಬರುತ್ತದೆ. ಇನ್ನೊಂದೆಡೆ ವಿಧವೆಯಾದ ಮೇಲೂ ಮದುವೆಯಾಗುವ ಉತ್ಸಾಹ ತೋರುವ ಉಮಾಳ ನಿಲುವು ವೈಚಾರಿಕತೆಯಿಂದ ಕೂಡಿದುದು. ತನ್ನ ಜೀವನದಲ್ಲಿನ ಋಣಾತ್ಮಕ ಅಂಶವನ್ನು ಧನಾತ್ಮಕ ಅಂಶವಾಗಿ ಪರಿವರ್ತಿಸಿಕೊಳ್ಳುವ ಈಕೆಯದು ಜಾಣ ನಡೆಯಾಗಿದೆ. ಹೀಗೆ ಸಂಪ್ರದಾಯದ ಕಪಿಮುಷ್ಠಿಯಿಂದ ಹೊರಬಂದು ಪುನರ್ ವಿವಾಹವಾಗಿ ವಿಧವಾ ಬದುಕನ್ನು ಮತ್ತೆ ಹಸನು ಮಾಡಿಕೊಳ್ಳುವ ಉಮಾಳಂತಹ ಸ್ತ್ರೀ ಪಾತ್ರಗಳು ಆದರ್ಶನೀಯವಾಗಿ ಕಂಡುಬರುತ್ತದೆ. ಇಂತಹ ವಿಭಿನ್ನ ಆಯಾಮಗಳನ್ನು ದೃಷ್ಟಿಯಲ್ಲಿರಿಸಿಕೊಂಡ ಲೇಖಕಿ, ವಿಧವಾ ಸಮಸ್ಯೆ ಹಾಗೂ ಪರಿಹಾರೋಪಾಯಗಳನ್ನು ಕುರಿತಂತೆ ಪ್ರಸ್ತುತ ಅಧ್ಯಾಯದಲ್ಲಿ ವಿಶ್ಲೇಷಿಸಿದ್ದಾರೆ. ಆ ಮೂಲಕ ವ್ಯವಸ್ಥೆಯಲ್ಲಿನ ನಿಲುವುಗಳನ್ನು ಪಾತ್ರಗಳ ಮುಖೇನ ಪ್ರಸ್ತುತಪಡಿಸಿದ್ದಾರೆ. ಇದರೊಂದಿಗೆ ವಿಧವೆಯರು ಸಾಮಾಜಿಕವಾಗಿ ಎದುರಿಸಬೇಕಾದ ಸನ್ನಿವೇಶಗಳು ಮತ್ತು ಪ್ರತಿಕ್ರಿಯೆಗಳ ಬಗೆಗೆ ನಾಗರಿಕ ಸಮಾಜದ ಪ್ರಜ್ಞೆಯನ್ನು ಎಚ್ಚರಗೊಳಿಸುವ ಪ್ರಯತ್ನ ಮಾಡಿದ್ದಾರೆ. ಜೀವನದಲ್ಲಿ ಅದರಲ್ಲೂ ಏಳು–ಬೀಳಿನ ಸಂದರ್ಭದಲ್ಲಿ ಸರಿ–ತಪ್ಪುಗಳ ವಿವೇಚನೆ ಮಾಡಿ ಮುಂದಡಿಯಿಡುವ ಕ್ರಮ ರೂಪಿಸಿಕೊಳ್ಳಬೇಕೆಂಬ ಅರಿವು ಮೂಡಿಸುವ ಲತಾ ಗುತ್ತಿಯವರು ಸಂಪ್ರದಾಯವನ್ನು ಇಲ್ಲಿ ಪುನರ್ ವಿಮರ್ಶೆಗೆ ಒಳಪಡಿಸುತ್ತಿದ್ದಾರೆ. ಅಲ್ಲದೇ ಸಂಪ್ರದಾಯದ ಮೌಢ್ಯದಿಂದ ಹೊರಬಂದು ವಿವೇಚನಾಯುತ

ಕ್ರಮದಿಂದ ಸರಿಯಾದ ಬದುಕನ್ನು ಕಟ್ಟಿಕೊಳ್ಳಬೇಕೆಂಬ ನಿಲುವು ವ್ಯಕ್ತಪಡಿಸುವ ಲೇಖಕಿಯ ಬರೆವಣಿಗೆ ವಿಶ್ವಾಸಾರ್ಹವಾಗಿದ್ದು, ಯುವ ಜನತೆಯ ಬದುಕಿಗೆ ದಾರಿದೀಪವಾಗಿದೆ.

**ಕೊನೆಟಿಪ್ಪಣಿಗಳು**

1. ಲತಾ ಗುತ್ತಿ. *ಕರಿನೀರು.* ಪುಟ 180
2. *ಅದೇ.* ಪುಟ 187
3. ಪೂರ್ವಾಚಾರ್, ಎಮ್. *ಭಾರತೀಯ ಸಮಾಜ ಮತ್ತು ಸಂಸ್ಕೃತಿ.* ಪುಟ 219
4. ಲತಾ ಗುತ್ತಿ. *ಚದುರಂಗ.* ಪುಟ 212

**ಪರಾಮರ್ಶನ ಗ್ರಂಥಗಳು**


- ಲತಾ ಗುತ್ತಿ. (2015). *ಕರಿನೀರು.* ಅಂಕಿತ ಪುಸ್ತಕ.
- ಲತಾ ಗುತ್ತಿ. (2023). *ಚದುರಂಗ.* ಅಂಕಿತ ಪುಸ್ತಕ.
- ಪೂರ್ವಾಚಾರ್, ಎಮ್. (2002). *ಭಾರತೀಯ ಸಮಾಜ ಮತ್ತು ಸಂಸ್ಕೃತಿ.* ವಿಶ್ವಕರ್ಮ ಪ್ರಕಾಶನ.